ನಡೆದಿದೆ. ಈ ಒಂದು ವಿವಾದ ಲೇಬರ್ ಕಮೀಷನ್ ಮುಂದೆ ಬಂದು, ಅದು ಒಂದು ತಿಂಗಳ ಹಿಂದೆ ಈ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ಒಂದು ಸಬ್‌ಕಮಿಟಿ ನೇಮಕ ಮಾಡಬೇಕೆಂದು ತಿಳಿಸಿದೆ. ಸರ್ಕಾರ ಆದಷ್ಟು ಬೇಗ ಈ ಸಬ್-ಕಮಿಟಿಯನ್ನು ನೇಮಕ ಮಾಡುತ್ತದೆ. ಯಾರು ಇಲ್ಲಿ ಬಹಳ ಕಾಲದಿಂದ ಕೆಲಸ ಮಾಡುತ್ತಿದ್ದಾರೆ, ಅಂತಹವರನ್ನು ಖಾಯಂ ಮಾಡಬೇಕೆಂದು ಈ ಕಾನೂನು ಹೇಳುತ್ತದೆ. ಈ ಕಾನೂನಿಗನುಗುಣವಾಗಿ ಕೆಲಸ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ;

ಶ್ರೀ ಪಂಪಾಪತಿ.—ಈಗ ಭದ್ರಾವತಿ ಕಾರ್ಖಾನೆಯಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿರುವವರು ೭೦೦ ರೂಪಾಯಿಗಳವರೆಗೆ ಪಗಾರ ಪಡೆಯುತ್ತಾರೆ. ಆದರೆ ಕಂಟ್ರಾಕ್ಟ್ ಕಾರ್ಮಿಕರಿಗೆ ದಿನವೊಂದಕ್ಕೆ ೫ ರಿಂದ ೬ ರೂಪಾಯಿಗಳವರೆಗೆ ಮಾತ್ರ ದಿನಕೂಲಿ ಕೊಡಲಾಗುತ್ತಿದೆ. ಈ ರೀತಿಯಿಂದ ಕಾರ್ಮಿಕರ ಹಕ್ಕನ್ನು ಮೊಟಕು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ಈ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದವರ ಅಗ್ರಿಮೆಂಟ್‌ನ್ನು ತಾವು ಕಾರ್ಯಗತ ಮಾಡಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಏನೇನು ಸಂಬಳಸಾರಿಗೆ ಕೊಡಬೇಕೆಂದು ಹೇಳಿದ್ದಾರೆ, ಅದರಂತೆ ಕೊಡಲಾಗುತ್ತದೆ.

ಶ್ರೀ ಎಸ್. ಮಹದೇವ್.—ಈಗ ಭದ್ರಾವತಿ ಕಾರ್ಖಾನೆಯಲ್ಲಿ ಟೆಂಪರರಿಯಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ? ಅಲ್ಲಿ ಒಂದೆರಡು ವರ್ಷಗಳಿಂದ ಕೆಲಸ ಮಾಡುತ್ತಿರುವವರನ್ನು ಖಾಯಂಗೊಳಿಸದೆ ಇತ್ತೀಚೆಗೆ ಸೇರಿದವರನ್ನು ಖಾಯಂ ಮಾಡಿದ್ದಾರೆಂಬ ದೂರುಗಳು ಬಂದಿದೆ. ಇದು ಸರ್ಕಾರದ ಗಮನಕ್ಕೂ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದೆರಡು ವರ್ಷಗಳಿಂದ ಅಲ್ಲ, ೧೫—೨೦ ವರ್ಷಗಳಿಂದ ಕೆಲವರು ಕೆಲಸ ಮಾಡುತ್ತಿದ್ದಾರೆ. ಇದು ಒಂದು ವರ್ಷದ ಪ್ರಶ್ನೆಯಲ್ಲ. ಇಂತಹವರ ವಿಚಾರದಲ್ಲಿ ಕಂಟ್ರಾಕ್ಟ್ ಲೇಬರರ್ಸ್ ರೆಗ್ಯುಲೇಷನ್ ಅಂಡ್ ಅಬಾಲಿಷನ್ ಆಕ್ಟ್ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ಕಾರ್ಮಿಕರ ಸಮಸ್ಯೆಗಳನ್ನು ಪರಿಶೀಲಿಸಲು ಈ ಹಿಂದಿನ ಸರ್ಕಾರ ಶ್ರೀ ಎಸ್. ಬಿ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿತ್ತು. ಆ ಕಮಿಟಿಯವರು ಸರ್ಕಾರಕ್ಕೆ ಕೆಲವೊಂದು ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನು ಜಾರಿಗೆ ತರಲು ಸರ್ಕಾರ ಆಲೋಚನೆ ಮಾಡುತ್ತಿದೆಯೇ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಮಿತಿಯವರು ಏನೇನು ಸಲಹೆಗಳನ್ನು ಮಾಡಿದ್ದಾರೆಂಬುದನ್ನು ನಾನು ನೋಡುತ್ತೇನೆ.

ಧಾರವಾಡ ಜಿಲ್ಲೆಯಲ್ಲಿ ವರದಾನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣ

೫೧(೪೭) ಶ್ರೀ ಎಂ. ಎಂ. ನಡಾಫ್ (ಶಿಗಾಂವಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಧಾರವಾಡ ಡಿಸ್ಟ್ರಿಕ್ಟ್, ಸವಣೂರು ತಾಲ್ಲೂಕಿನ ಕುಸಿಮೆಲ್ಲಿ ಹಳ್ಳಿಯ ಬಳಿ ವರದಾ ನದಿಗೆ ಅಡ್ಡಲಾಗಿ ಒಂದು ಬ್ಯಾರೇಜ್ ಕಟ್ಟುವ ಕೆಲಸವು ಬಹಳ ಹಿಂದೆಯೇ ಮಂಜೂರಾಗಿದೆಯೆಂದೂ ಮಂತ್ರಿ ಅಯವ್ಯಯ ಪಟ್ಟಿಯಲ್ಲಿ ಸೇರಿತ್ತು, ಎಂದೂ ಸರ್ಕಾರದ ಗಮನಕ್ಕೆ ಬಂದಿದೆಯೆ.

(ಆ) ನೀರಾವರಿ ಇಲಾಖೆಯ ಅಭಿಯಂತರರು ೧೫ ಮಿಲಿಯ ಮೇಲೆ ಹೇಳಿದ ಬ್ಯಾರೇಜ್ ಕೆಲಸಕ್ಕೆ ಈಗಾಗಲೇ ಪರಿಷ್ಕೃತ ನಕ್ಷೆ ಮಂತ್ರಿ ಅಂದಾಜುಗಳನ್ನು ಶೀಘ್ರ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ ?

(ಇ) ಇದನ್ನು ಮಂಜೂರು ಮಾಡಲು ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

(ಎ) ಹೌದು, ೧೯೭೬ರಲ್ಲಿಯೇ ಮಂಜೂರು ಆಗಿತ್ತು.

(ಆ) ಹೌದು. ಪರಿಷ್ಕೃತ ಅಂದಾಜು ಈಚೆಗೆ ಬಂದಿರುತ್ತೆ.

(ಇ) ಪರಿಷ್ಕೃ ಅಂದಾಜು ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಂ. ನಡಾಫ್.—ಪರಿಷ್ಕೃತ ಅಂದಾಜು ಸರ್ಕಾರಕ್ಕೆ ಯಾವಾಗ ಬಂದಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ತಾ ೧೦-೮-೧೯೮೩ರಲ್ಲಿ ಸರ್ಕಾರಕ್ಕೆ ಬಂದಿದೆ. ಇದು ಬಜೆಟ್‌ನಲ್ಲಿ ಸೇರಿದೆ. ಇದಕ್ಕೆ ಆಡಳಿತ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ. ಎಂ. ನಡಾಫ್.—ಇದು ಬಜೆಟ್‌ನಲ್ಲಿ ಸೇರಿದೆ ಎಂದು ಹೇಳಿದರು. ಆದರೆ ಇದು ೧೯೭೬ರಲ್ಲಿಯೇ ಮಂಜೂರಾಗಿತ್ತು. ಆದ್ದರಿಂದ ಇದಕ್ಕೆ ಜಾಗ್ರತೆ ಮಂಜೂರಾತಿ ಕೊಟ್ಟು ಕೆಲಸವನ್ನು ಜಾಗ್ರತೆ ಕಾರ್ಯಗತ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾಡುತ್ತೇವೆಂದು ಹೇಳಿದ್ದೇನೆ. ಪರಿಷ್ಕೃತ ಅಂದಾಜು ಮೊನ್ನೆ ತಾನೆ ಬಂದಿದೆ. ಇದನ್ನು ಆದಷ್ಟು ಬೇಗ ಮಂಜೂರು ಮಾಡುತ್ತೇವೆ ಮತ್ತು ಕೆಲಸವನ್ನು ಪ್ರಾರಂಭ ಮಾಡಲು ಆದೇಶ ಕೊಡುತ್ತೇನೆ.

ವಿಷಯ.—ಎಣ್ಣೆ ತೆಗೆದಂ ಉಳಿದ ಗಂಧದ ಧೂಳಿನ ರಫ್ತು

೫೦(೯೯). ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಎ) ರಾಜ್ಯ ಸರಕಾರದ ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಎಣ್ಣೆ ತೆಗೆದು ಉಳಿದ ಧೂಳು ಯಾವ ವರ್ಷದಿಂದ ರಫ್ತು ಮಾಡುತ್ತಿದೆ ಹಾಗೂ ಧೂಳಿನ ವಾರ್ಷಿಕ ಪ್ರಮಾಣ ಎಷ್ಟು ಮತ್ತು ಅದರ ಸೊತ್ತು ಎಷ್ಟು.

(ಆ) ಮೇಲ್ಕಂಡ ಎಣ್ಣೆ ತೆಗೆದು ಗಂಧದ ಹಿಪ್ಪೆ ಪುಡಿ ೧೯೭೯ ರಿಂದ ೧೯೮೩ರವರೆಗೆ ಯಾವ ಯಾವ ದೇಶಗಳಿಗೆ ರಫ್ತು ಮಾಡಲಾಗಿದೆ ಹಾಗೂ ಅದಕ್ಕೆ ಬಿನ್ನಿಗೆ ಯಾವ ದರದಂತೆ ಸರಕಾರಕ್ಕೆ ಸಂದಾಯವಾಗುತ್ತಿದೆ. ವಿವರಗಳನ್ನು ತಿಳಿಸುವುದು

(ಇ) ಕರ್ನಾಟಕದಲ್ಲಿ ಅಗರ ಬತ್ತಿ ಉದ್ಯಮಕ್ಕೆ ಅವಶ್ಯವಾಗಿರುವ ಮೇಲ್ಕಂಡ ಶ್ರೀಗಂಧದ ಎಣ್ಣೆ ತೆಗೆದು ಉಳಿದ ಹಿಪ್ಪೆ ಪುಡಿಯನ್ನು ದೇಶಗಳಿಗೆ ರಫ್ತು ಮಾಡುವುದನ್ನು ನಿಷೇಧಿಸುವಂತೆ ಹಾಗೂ ಅಗರಬತ್ತಿ ಉದ್ಯಮಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವಂತೆ ಸಲಹೆ ಸರ್ಕಾರದವರಲ್ಲಿ ಇದೆಯೇ.

(ಈ) ಮೇಲ್ಕಂಡ ಗಂಧದ ಎಣ್ಣೆ ಹಿಪ್ಪೆ ಪುಡಿಯನ್ನು ಬೊಂಬಾಯಿ, ಕಲ್ಕತ್ತಾ ಸರಕುಗಳನ್ನು ಕಡಿಮೆಬೆಲೆಯಲ್ಲಿ ಕರ್ನಾಟಕದಲ್ಲಿ ಪ್ರಮುಖ ಅಗರ ಬತ್ತಿ ಚಿಕ್ಕ ಉದ್ಯಮಿಗಳಿಗೆ ಕೊಡುವಂತೆ ಪ್ರಯತ್ನಿಸುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

೧೯೭೩-೭೪ ರಿಂದ ಈ ಕೆಳಗೆ ನಮೂದಿಸಿರುವ ಪ್ರಮಾಣದಲ್ಲಿ ರಫ್ತು ಮಾಡಲಾಗಿದೆ.